

ಪುನರ್ವಸತಿ ಶಿಬಿರದಲ್ಲಿ ಐಸಿಸ್ ಉಗ್ರರ ಕುಟುಂಬಸ್ಥರು

ಕುರುಕ್ಷೇತ್ರದ ಸ್ಮಶಾನದಲ್ಲಿ ಯಕ್ಷಿಣಿಯರು ಯುದ್ಧದ ಭೀಕರತೆಯನ್ನು ಚರ್ಚಿಸುವ ಕಥೆ ಕೇಳಿದ್ದೇವೆ. ಮಹಾಭಾರತದ ಆ ಸನ್ನಿವೇಶವೇ ಕುವೆಂಪು ಅವರ 'ಸ್ಮಶಾನ ಕುರುಕ್ಷೇತ್ರಂ' ನಾಟಕದ ಕಥಾವಸ್ತು.

ಯುದ್ಧೋತ್ತರ ರಣಭೂಮಿಯಲ್ಲಿ ರಾಶಿ ರಾಶಿ ಹೆಣಗಳ ನಡುವೆ ಅಜ್ಜಿಯೊಬ್ಬಳು ತನ್ನ ಮಗನನ್ನು, ಹೆಣ್ಣೊಬ್ಬಳು ತನ್ನ ಗಂಡನನ್ನು ಹುಡುಕುತ್ತಿದ್ದಾರೆ. ಅರಸನಾಸೆಯೇ ವಿನಾಶದ ಮೂಲ ಎಂದವರು ಮಾತುಕತೆ ನಡೆಸಿದ್ದಾರೆ. ಹೆಣಗಳನ್ನು ದಾಟಿ ಸಾಗುತ್ತಾ ತಮ್ಮವರಿಗಾಗಿ ತಡಕಾಡುತ್ತಿದ್ದಾರೆ. ಮನುಷ್ಯನ ಯುದ್ಧದ ಹಪಹಪಿಯನ್ನು ಯಕ್ಷಿಣಿಯರು ಹೀಯಾಳಿಸುತ್ತಿದ್ದಾರೆ. ಇದು ಕಥೆಯಾದರೆ, ದಶಕಗಳ ಕಾಲ ಯುದ್ಧದ ಮದ್ದುಗುಂಡಿನ ಮೊರೆತದಲ್ಲೇ ಮುಳುಗಿದ ಐಸಿಸ್ ಆಕ್ರಮಿತ ಸಿರಿಯಾದಲ್ಲಿ ಈಗಷ್ಟೇ ಶಾಂತಿ ನೆಲೆಸುತ್ತಿದೆ. ಆದರೂ ಆಂತರಿಕ ಕಲಹವೇನೂ ಕಡಿಮೆಯಾಗಿಲ್ಲ. ಮುಂಗಾರು ಮಳೆಯಲ್ಲಿ ಬರುವ ಮಿಂಚು–ಸಿಡಿಲಿನಂತೆ ಯಾವ ಕ್ಷಣದಲ್ಲಾದರೂ ಬಾಂಬು–ಗುಂಡುಗಳು ಭೋರ್ಗರೆಯಬಹುದು. ಅಂತಹ ಭಯಾನಕ ಸ್ಥಳವನ್ನು ಭಾರತೀಯ ಪತ್ರಕರ್ತರು ಇದೇ ಮೊದಲು ಖುದ್ದು ವೀಕ್ಷಿಸಿ ಬರೆದಿದ್ದಾರೆ.

ಕುರುಕ್ಷೇತ್ರ ಯುದ್ಧ ಒಂದು ಯುಗಕ್ಕೆ ಅಂತ್ಯ ಹೇಳಿ; ಹೊಸ ಯುಗಕ್ಕೆ ನಾಂದಿ ಹಾಡುತ್ತದೆ. ನಿತ್ಯವೂ ಕಲಹದ ಕರಾಳ ನೆರಳಲ್ಲಿಯೇ ನರಳುವ ದಕ್ಷಿಣ ಪ್ರಾಚ್ಯದ ಸಿರಿಯಾ ಐಸಿಸ್ ಉಗ್ರರ



ಬಾಂಬ್ ದಾಳಿಗೆ ತುತ್ತಾದ ನಾವಿ ಮಸೀದಿ